ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ, ಯಾವ ಬಜೆಟ್‌ನಲ್ಲಿ ಎಷ್ಟು ಹಣ ಮಂಡನೆ ಮಾಡಿದರೂ ಪೂರ್ಣಪ್ರಮಾಣದಲ್ಲಿ ಅದು ಸಾರ್ವಜನಿಕರಿಗೆ ತರುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಕೆಲಸ ಆಗದೇ ಇರತಕ್ಕಂಥ ಕಾಮಗಾರಿಗಳಿಗೆ ಯಾವುದೇ ರೀತಿಯ ಪೇಮೆಂಟ್ ಮಾಡಕೂಡದು ಎಂದು ಸಣ್ಣ ನೀರಾವರಿ ಇಲಾಖೆಯವರಿಗೆ ಸೂಚನೆ ಕೊಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಆಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಈ ಕೂಡಲೇ ಅವ್ಯವಹಾರದ ಬಗ್ಗೆ ತನಿಖೆ ಮಾಡಬೇಕು.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) :— ಸರ್ಕಾರ ಇದರ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :— ಪೇಮೆಂಟ್ ಬಗ್ಗೆ ಕೂಡ ಸೂಚನೆ ಕೊಟ್ಟುಬಿಡಿ. ಏಕೆಂದರೆ, ನಾನು ಇಲ್ಲಿ ಇದನ್ನು ಪ್ರಸ್ತಾಪ ಮಾಡುತ್ತೇನೆಂದು, ಬಿಲ್‌ಗಳನ್ನು ರೆಡಿಮಾಡಿ ಪೇಮೆಂಟ್‌ಗಾಗಿ ಕಳುಹಿಸಿರುವ ವಿಷಯ ನನಗೆ ಗೊತ್ತಾಗಿದೆ. ನಾನು ಈ ವಿಷಯವನ್ನು ಇಲ್ಲಿ ಪ್ರಶ್ನೆ ಮಾಡುತ್ತೇನೆಂದಾಕ್ಷಣವೇ ಅವರು ಬಿಲ್‌ಗಳನ್ನು ಕೊಡಬೇಕು ಎನ್ನುವುದಾದರೆ, ನಿಮ್ಮ ಅಧಿಕಾರಿಗಳಿಗೂ ಮತ್ತು ಆ ಗುತ್ತಿಗೆದಾರರಿಗೆ ಎಷ್ಟು ಕನೆಕ್ಷನ್ ಇದೆ ಎನ್ನುವುದನ್ನು ತಾವು ಆಲೋಚಿಸಬೇಕು. ತಕ್ಷಣ ಪೇಮೆಂಟ್ ತಡೆಯಬೇಕು ಹಾಗೂ ಇದರ ಬಗ್ಗೆ ತನಿಖೆ ಮಾಡಬೇಕು.

ಶ್ರೀ ಕೆ.ಎಸ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) :— ಉಪಾಧ್ಯಕ್ಷರೆ, ಕೂಡಲೇ ನಾನು ಕಾರ್ಯದರ್ಶಿಯವರಿಂದ ಮುಖ್ಯ ಅಭಿಯಂತರವರಿಗೆ ನಿರ್ದೇಶನಕೊಟ್ಟು ತನಿಖೆ ಮಾಡಿ ಎಂದು ಹೇಳುತ್ತೇನೆ. ಕೆಲಸ ಮಾಡಿದ್ದರೆ ಅವರು ಬಿಲ್ ಕೊಡುತ್ತಾರೆ, ಕೆಲಸ ಮಾಡಿಲ್ಲದಿದ್ದರೆ ಅವರು ಬಿಲ್ ಕೊಡುವುದಿಲ್ಲ, ಒಂದು ಪಕ್ಷ ಬಿಲ್‌ನಲ್ಲಿ ಏನಾದರೂ ತಪ್ಪು ಮಾಡಿದ್ದರೆ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಾನು ಆದೇಶ ಮಾಡುತ್ತೇವೆ.

(ಆ) ಕುಂದಾಪುರ ತಾಲ್ಲೂಕಿನ ಶಂಕರನಾರಾಯಣ ಪೋಲೀಸ್ ಠಾಣೆ ಕುರಿತು.

+ ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ) :— ಮಾನ್ಯ ಉಪಾಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಶಂಕರನಾರಾಯಣ ಪೋಲೀಸ್ ಠಾಣೆ ಬರುತ್ತದೆ. ಈ ಪೋಲೀಸ್ ಠಾಣೆಗಳು ಆಗಬಾರದು ಆದರಂತೆ ಬಾರ್‌ಗಳೂ ಕೂಡ ಪೋಲೀಸ್ ಠಾಣೆ ಆಗಬಾರದು. ಏಕೆಂದರೆ ಕೆಲವು ಪೋಲೀಸ್ ಠಾಣೆಗಳಲ್ಲಿ ಅಲ್ಲಿಯೇ ಕುಡಿಯುವುದು, ಅಲ್ಲಿಯೇ ತಿನ್ನುವುದು ನಡೆಯುತ್ತಿದೆ. ಮತ್ತೆ ಕೆಲವು ಪೋಲೀಸ್‌ರವರು ಬಾರ್‌ಗಳಿಗೆ ಬಂದು ಅಲ್ಲಿಯೇ ಕುಡಿದು ಅಲ್ಲಿಯೇ ತೀರ್ಮಾನ ತೆಗೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುಡುಕರ ಅತಿರೇಕದಿಂದ ಏನಾಗುತ್ತದೆ ಎಂದರೆ, ಶಾಲೆಗಳಿಗೆ, ಪಂಚಾಯಿತಿ ಕಛೇರಿಗಳಿಗೆ ಹೋಗಿ ಅಲ್ಲಿ ಬಾಗಿಲು ಒಡೆದು ಹಾಕುತ್ತಿದ್ದಾರೆ. ಗಲಾಟೆ ಮಾಡುತ್ತಾರೆ, ಈ ಬಗ್ಗೆ ದೂರುಗಳೆಲ್ಲಾ

ಬಂದಿದೆ. ಇದೇ ರೀತಿ ಮತ್ತೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರತಕ್ಕಂಥ ಶಾಲೆಗೆ ನುಗ್ಗಿ ಅಲ್ಲಿರತಕ್ಕಂಥ ಫ್ಯಾನ್ ಕಿತ್ತುಹಾಕುವುದು, ಇಂಥ ಅನೇಕ ಸಮಸ್ಯೆಗಳು ಈ ಪೋಲಿಸರ್ ಮತ್ತು ಗುಂಡಾಗಳ ಅನೈತಿಕ ಸಂಬಂಧದಿಂದ ಉಂಟಾಗುತ್ತವೆ. ಬಾರ್‌ನಲ್ಲಿ ಪೋಲಿಸ್‌ನವರು ಕುಳಿತು ಕುಡಿಯುತ್ತಿದ್ದರೆ ಅವರ ಎದುರಗಡೆ ಒಬ್ಬ ಮುಗ್ದನ ಮೇಲೆ ಹಲ್ಲೆಯಾಗುತ್ತದೆ. ಇಂಥ ಸಂದರ್ಭದಲ್ಲಿ ಹಲ್ಲೆಯಾಗಿರುವ ವ್ಯಕ್ತಿಯ ವಾಚ್ ಮತ್ತು ಚೈನ್ ಕಳೆದು ಹೋಗುತ್ತದೆ. ಅವನು ಕುಂದಾಪುರ ಸರ್ಕಾರಿ ಆಸ್ಪತ್ರೆಗೆ ಬಂದು ದೂರು ದಾಖಲು ಮಾಡುತ್ತಾನೆ. ಈ ರೀತಿ ಆಸ್ಪತ್ರೆಯ ಮೂಲಕ ದೂರು ದಾಖಲಾದಂಥ ಸಂದರ್ಭದಲ್ಲಿ ಎಫ್.ಐ.ಆರ್.ನಲ್ಲಿ ವಾಚ್ ಮತ್ತು ಚೈನ್ ಹೋಗಿರುವುದು ಇರುವುದಿಲ್ಲ. ಇದರ ಬಗ್ಗೆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ದೂರು ಕೊಟ್ಟಾಗ, ಸರ್ಕಲ್ ಇನ್ಸ್‌ಪೆಕ್ಟರ್‌ರವರು ಶಂಕರನಾರಾಯಣ ಪೋಲಿಸ್ ಠಾಣೆಗೆ ಬಂದು ಏನೆಂದು ಹೇಳುತ್ತಾರೆಂದರೆ, ನಮ್ಮ ಊರಿನಲ್ಲಿ ಕಲ್ಲುಕುಟಿಗ ಎನ್ನುವ ಒಂದು ದೇವರು ಇದೆ, ಇದು ಬಹಳ ಘಟಾನುಘಟಿ ದೇವರು, ಈ ದೇವರ ಮೇಲೆ ಪ್ರಮಾಣ ಮಾಡಿ ಹೇಳು ಎನ್ನುವಂತಹ ಮಾತನ್ನು ಹೇಳುತ್ತಾರೆ. ಇದರಂತೆ ಪೋಲಿಸರ್‌ವರು ಆ ವ್ಯಕ್ತಿಯನ್ನು ಆ ದೇವರ ಹತ್ತಿರ ಕರೆದುಕೊಂಡು ಹೋಗಿ ಪ್ರಮಾಣ ಮಾಡಿಸುತ್ತಾರೆ. ಇಷ್ಟೆಲ್ಲಾ ಮಾಡಿದರೂ ಕೂಡ ಇವತ್ತಿನವರೆವಿಗೂ ಆ ಚೈನ್ ಮತ್ತು ವಾಚ್ ಹೋಗಿರುವ ಬಗ್ಗೆ ಎಫ್.ಐ.ಆರ್.ನಲ್ಲಿ ಆಗಲೀ ಅಥವಾ ಆ ಕೇಸ್‌ನಲ್ಲಿ ಆಗಲಿ ಎಲ್ಲೂ ದಾಖಲಿ ಆಗಿಲ್ಲ. ಕೊನೆಗೆ ಈ ಪೋಲಿಸ್‌ನವರಿಂದ ಕಳೆದುಹೋಗಿರುವ ಸ್ವತ್ತನ್ನು ಕೊಡಿಸಲಿಕ್ಕೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಈ ರೀತಿ ವ್ಯವಸ್ಥೆ ಆದರೆ ಹೇಗೆ? ಸಾಮಾನ್ಯವಾಗಿ ಪೋಲಿಸ್‌ನವರು ತಪ್ಪು ಮಾಡಿದರೆ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಕ್ರಮ ಕೈಗೊಳ್ಳಬೇಕು, ಒಂದು ಪಕ್ಷ ಸರ್ಕಲ್ ಇನ್ಸ್‌ಪೆಕ್ಟರ್‌ರವರು ತಪ್ಪು ಮಾಡಿದರೆ ಅವರ ಮೇಲಿನ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು, ಯಾರ ಹತ್ತಿರ ಹೇಳಿದರೆ ನ್ಯಾಯ ಸಿಗುತ್ತದೆ? ಇದಕ್ಕೆ ಕೊನೆಯ ಅಸ್ತ್ರ ಪ್ರಮಾಣ. ಈ ಪ್ರಮಾಣದಲ್ಲಿ ಕೂಡ ನ್ಯಾಯ ಸಿಗದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ನನ್ನ ಕಳಕಳಿ ಏನೆಂದರೆ, ಪೋಲಿಸ್ ಠಾಣೆಗಳು ಬಾರ್ ಆಗಬಾರದು, ಬಾರ್‌ಗಳು ಪೋಲಿಸ್ ಠಾಣೆಗಳು ಆಗಬಾರದು ಎನ್ನುವುದೇ ನನ್ನ ಕಳಕಳಿಯ ಮನವಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :— ಉಪಾಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳು ಎಸ್.ಪಿ. ಅವರಿಂದ ವರದಿಯನ್ನು ತರಿಸಿಕೊಂಡು ಅಲ್ಲಿ ಏನಾದರೂ ನ್ಯೂನತೆಗಳು ಇದ್ದಲ್ಲಿ ಅದನ್ನು ಸರಿಪಡಿಸುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

(ಕ) ಸ್ಟೈಪೆಂಡರಿ ಪದವೀಧರರ ಸೇವೆ ಖಾಯಂ ಒತ್ತಾಯ.

ಶ್ರೀ ವಿ. ರುಕ್ಮಯ್ಯ ಪೂಜಾರಿ (ವಿಧ್ಲ) :— ಉಪಾಧ್ಯಕ್ಷರೆ, 1978ರಿಂದ ಸುಮಾರು 17 ವರ್ಷಗಳಿಂದ ಸ್ಟೈಪಂಡರಿ ಪದವೀಧರರು ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ